International Journal of Kannada Research
www.kannadajournal.com

ISSN: 2454–5813
IJKR 2020; 6(3): 144-146
© 2020 IJKR
www.kannadajournal.com
Received: 11-06-2020
Accepted: 18-07-2020

ಲೇ. ಸುನೀತ ಬಿ.ವಿ.
ಕನ್ನಡ ವಿಭಾಗ
ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು, 560001
ಕರ್ನಾಟಕ, ಭಾರತ

Corresponding Author:
ಲೇ. ಸುನೀತ ಬಿ.ವಿ.
ಕನ್ನಡ ವಿಭಾಗ
ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು, 560001
ಕರ್ನಾಟಕ, ಭಾರತ

# ಅಕ್ಕಮಹಾದೇವಿಯ ಬದುಕು ಹಾಗೂ ವಿಮೋಚನೆಯ ತುಡಿತ

**ಲೇ. ಸುನೀತ ಬಿ.ವಿ.**

‘ವಿಮೋಚನೆ’ ಎಂದರೆ ಏನೆಂದು ಅಕ್ಕನ ವಾಸ್ತವ ಜೀವನವನ್ನಾಧರಿಸಿ ಹೇಳಿದರೆ, ಬಿಡಿಸಿಕೊಳ್ಳುವಿಕೆ, ಬೇರ್ಪಡಿಸಿಕೊಳ್ಳುವಿಕೆ ಎನ್ನುವ ಸಿದ್ದ ಅರ್ಥಗಳಿಗಿಂತ ತುಸು ಭಿನ್ನವಾದ ಆರ್ಥ ದೊರೆಯುತ್ತವೆ. ಬುದ್ಧ ಕುಟುಂಬ ದಾಂಪತ್ಯ ರಾಜ್ಯ ಕೋಶ ವೈಭವದ ಬದುಕಿನಿಂದ ಹೊರಬಂದು ನಂತರ ಅಂದರೆ ಐಹಿಕ ಜೀವನದಿಂದ ವಿಮೋಚನೆ ಪಡೆದು ತಾನು ಕಂಡುಕೊಂಡ ಬದುಕಿನ ಸತ್ಯಸಂಗತಿಗಳನ್ನು ಮನುಕುಲದ ಮೌಲ್ಯಗಳಾಗಿ ಬೋಧಿಸಿದನು. ಆದರೆ ಅಕ್ಕನ ವಿಮೋಚನೆಯ ತುಡಿತ ಬಾಲ್ಯದಲ್ಲಿಯೇ ಸಿದ್ಧಿಗೊಂಡಿರುವಂತಹದ್ದು, ವೈಭೋಗ ಮೂಲವಾಸೆಯಿಲ್ಲದ ಈ ಸಿದ್ದಿಯಲ್ಲಿ ಆಧ್ಯಾತ್ಮದ ನೆಲೆಯಿದೆ. ಸಂಪ್ರದಾಯ ಸಮಾಜದ ಕಟ್ಟುಪಾಡುಗಳ ವಿರೋಧವಿದೆ. ಅಕ್ಕಮಹಾದೇವಿ ಸಾಂಪ್ರದಾಯಿಕ ಶಿವಭಕ್ತಿಯ ಶಿಷ್ಟಾಚಾರ ಹೊಂದಿರುವ ಕುಟುಂಬದಲ್ಲಿ ಹುಟ್ಟಿ ಬೆಳೆದವಳು. ಲಿಂಗ ಭಕ್ತಿ, ಆತ್ಮ ಚಿಂತನೆಯಲ್ಲಿ ಮಗ್ನಳಾದ ಅಕ್ಕನ ಆಧ್ಯಾತ್ಮದ ಆಸಕ್ತಿ ಹಾಗೂ ಸೆಳೆತಗಳು ಬಾಲ್ಯದಲ್ಲಿಯೇ ಹುಟ್ಟುವಂತಹ ವಾತಾವರಣದಲ್ಲಿ ಬೆಳೆದಳು. ಆಧ್ಯಾತ್ಮಿಕ ಕ್ಷೇತ್ರದ ಮಹಿಳಾ ಅನುಭಾವಿಗಳ ಕಥೆಗಳನ್ನು ಕೇಳುತ್ತಲೇ ಬೆಳೆದ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನನ್ನು ಒಲಿಸುವ ಗಾಢವಾದ ಅಪೇಕ್ಷೆಯೊಂದಿಗೆ ‘ಉರಕ್ಕೆ ಜವ್ವನಗಳು ಬಾರದ ಮುನ್ನ, ಮನಕ್ಕೆ ನಾಚಿಕೆಗಳು ತೋರದ ಮುನ್ನ,’ ಚಿಗುರೊಡೆದಿದೆ. ಚೆನ್ನಮಲ್ಲಿಕಾರ್ಜುನನನ್ನು ಒಲಿಸುವ ಗಾಢವಾದ ಅಪೇಕ್ಷೆಯಾಗಿ ತನ್ನೊಳಗೆ ಅವನನ್ನೇ ಕನವರಿಸಿಕೊಂಡವಳು. ತಾನು ಆಂತರಿಕವಾಗಿ ಸಿದ್ಧಿಸಿಕೊಂಡದ್ದನ್ನು ಪರಿಪೂರ್ಣವಾಗಿ ಪಡೆಯಬೇಕಾದರೆ ಬಹಿರಂಗವಾಗಿ ಬುದ್ಧನಂತೆ ಕುಟುಂಬ ಸಂಸಾರ ಸಂಬಂಧಗಳನ್ನು ಮತ್ತು ಸಂಪ್ರದಾಯಿಕ ಸಮಾಜದ ಕಟ್ಟುಪಾಡುಗಳನ್ನು ಮೀರಬೇಕಾಗಿತ್ತು. ಅಕ್ಕನ ಈ ಮೀರುವಿಕೆಯ ಸಂಘರ್ಷವೇ ಅವಳ ‘ವಿಮೋಚನೆ’. ‘ತನುವಿನ ಸತ್ಯ ನಿಲ್ಲಿಸಿತ್ತು ಮನದ ವಿರಕ್ತಿ ಕೆಡಿಸಿತ್ತು ಘನವ ಕಾಣಲೀಯ’ದಾಗಿ ಎರಡು ನೆಲೆಯಲ್ಲಿ ತೀವ್ರ ಘರ್ಷಣೆಗೆ ಒಳಗಾದ ಅಕ್ಕನ ಈ ಸಂಘರ್ಷದಲ್ಲೇ ತನ್ನ ಸಿದ್ಧಿಯ ಹಂತವನ್ನು ಪರಿಪೂರ್ಣ ಪಡೆದುಕೊಂಡಿದ್ದಾಳೆ. ಅವಳ ಅಂತರಂಗದ ಒಳಮಿಳಿತ ತೀವ್ರಗೊಂಡಂತೆ ಬಹಿರಂಗದ ಲೌಕಿಕ ವ್ಯಾಪಾರಗಳಿಂದ ಮುಕ್ತಿಯನ್ನು ಪಡೆಯುತ್ತಾ ಹೋಗಿದ್ದಾಳೆ. ಆಕೆ ಕಷ್ಟಸಹಿಷ್ಣುತೆಯ ಹೋರಾಟದ ಮೂಲಕವಾಗಿ ಪಡೆದ ಬಿಡುಗಡೆಯ ಈ ನಿಲುವುಗಳೆ ಇವೊತ್ತಿನ ಸ್ತ್ರೀಪರ ಚಿಂತನೆಗಳು.

ಶೈವ ಪುರಾತನರ ಭಕ್ತಿ ಹಾಗೂ ಜೀವನ ವಿಚಾರಗಳನ್ನು ಆಲಿಸುತ್ತಾ ಅರಿಯುತ್ತಾ ಬೆಳೆದ ಅಕ್ಕನಲ್ಲಿ ಭಕ್ತಿ–ವಿರಕ್ತಿ ಹಾದಿಯಲ್ಲಿ ಸಾಗುವ ಆಸಕ್ತಿ ಹೆಚ್ಚಾಗುತ್ತಾ ಹೋಗುತ್ತದೆ. ಹಾಗಾಗಿ ಸ್ತ್ರೀತ್ವದ ಅರಿವನ್ನು ಮೀರಿದ ಆಧ್ಯಾತ್ಮ ಬಾಲ್ಯವನ್ನು ಅಕ್ಕ ಕಳೆದಳು. ಯೌವನವು ಮೂಡುವ ಮೊದಲೇ ಚೆನ್ನಮಲ್ಲಿಕಾರ್ಜುನನಲ್ಲಿ ಸೇರಿಕೊಂಡ ಭಾವನೆಗಳು ಆಕೆಯ ವಚನಗಳು ಸೂಚಿಸುತ್ತವೆ. ‘ಹೆಂಗೂಸೆಂಬ’ ಲೌಕಿಕ ಸಂಬಂಧವನ್ನು ಕಳಚಿಕೊಂಡ ಆಕೆಯ ಭಕ್ತಿಯ ಮಾರ್ಗ ಸ್ಪಷ್ಟವಾಗಿ ತೋರುತ್ತದೆ. ಅಕ್ಕನ ಭಕ್ತಿನಿಷ್ಟೆ ಹೆಚ್ಚಾದಂತೆ ತನ್ನ ಸುತ್ತಲ ಜಗತ್ತಿನ ಸಂಬಂಧಗಳಿಂದ ಅಂತರ ಬೆಳೆಸಿಕೊಳ್ಳುತ್ತಾ ಸಾಗುತ್ತಾಳೆ. ಭವಬಂಧನಗಳಿಂದ ಮುಕ್ತಳಾಗಲು ಶಿವಭಕ್ತಳಾಗಿ ಲಿಂಗದೀಕ್ಷೆ ಮೂಲಕ ಶಾಶ್ವತ ಸತಿಯಾಗಿ ಪರಮ ಪದವಿಗಾಗಿ ಗುರುಕರುಣೆಯ ಅನುಗ್ರಹ ಪಡೆಯುತ್ತಾಳೆ. ಅಕ್ಕ ತನ್ನ ಹಾದಿಯಲ್ಲಿ ಸಾಗಲು ಎದುರಾಗುವ ಕಠಿಣ ಪರಿಸ್ಥಿತಿಗಳನ್ನು ಮೆಟ್ಟಿ, ತನ್ನ ವಿರಾಗಿ ಜೀವನದ ಆಯ್ಕೆಯನ್ನು ಗಟ್ಟಿಗೊಳಿಸಿಕೊಳ್ಳುತ್ತಾ, ತನ್ನ ಸಾಧನೆಗೂ ಲೌಕಿಕ ಬದುಕಿಗೂ ನಡುವಿನ ಸಂಬಂಧವನ್ನು ದೃಢಪಡಿಸಿಕೊಂಡು ಸಾಗುತ್ತಾಳೆ. ಅಕ್ಕಮಹಾದೇವಿಯ ವೈಯಕ್ತಿಕ ವಿಚಾರಗಳು ಸ್ತ್ರೀ ಸಮಾನತೆ, ಸ್ವಾತಂತ್ರ, ಸಂವೇದನೆಯ ದೃಷ್ಟಿಯಿಂದ ಎಂದಿಗೂ ಪ್ರಸ್ತುತವಾಗಲು ಕಾರಣವಾಗಿದೆ.

ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ಹುಟ್ಟಿ ಬೆಳೆದ ಅಕ್ಕನ ಸಿದ್ಧಿಸಿಕೊಂಡ ವೈರಾಗ್ಯ ಸಾಧಕಳ ಮಹಾಸಾಹಸದ ಮೊದಲ ಹಂತದ ಕಥನ ‘ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ, ಭಯವಿಲ್ಲದ ನಿರ್ಭಯ

ಚೆಲುವಂಗೆ' ಮಾರುಹೋಗಿ 'ಹರನೇ ನೀನನಗೆ ಗಂಡನಾಗಬೇಕೆಂದು ಆರ್ತಳಾಗಿ ತನ್ನ ಮನದಿಂಗಿತವನ್ನು ನಿವೇದಿಸುತ್ತಾಳೆ. 'ಚಿಕ್ಕ ಚಿಕ್ಕ ಜಡೆಗಳ ಸುಲಪಲ್ಲ ಗೊರವ' ನಿನಗಾಗಿ 'ಹಗಲು ನಾಲ್ಕು ಜಾವ ಇರುಳು ನಾಲ್ಕು ಜಾವ' ಕಣ್ಣೆಲ್ಲ ಪ್ರಾಣವಾಗಿಸಿಕೊಂಡು ಕಾಯುತ್ತಾಳೆ. ಬಂದಾನೋ ಬಾರನೋ ಎನ್ನುವ ಕಳವಳದಲ್ಲಿ ಕುದಿಯುತ್ತಾಳೆ. ಅಂತರಂಗದಲ್ಲಿ ಚೆನ್ನಮಲ್ಲಿಕಾರ್ಜುನನ ಒಲವಿನ ಸತಿಯಾಗುವ ಭಕ್ತಿ ಗಟ್ಟಿಗೊಳ್ಳುತ್ತದೆ. ಬಹಿರಂಗದಲ್ಲಿ ತಾರುಣ್ಯ ಸಹಜ ಸೌಂದರ್ಯ ಕಣ್ಣುಕುಕ್ಕುತ್ತದೆ. ಆಕೆಯ ರೂಪವೇ ಆಕೆಗೆ ವೈರಿಯಾಗಿ ಕಾಡುತ್ತದೆ. ಊರ ದೊರೆ ಕೌಶಿಕನು ಮಹಾದೇವಿಯನ್ನು ಮದುವೆಯಾಗಲು ಬಯಸುತ್ತಾನೆ. ರಾಜಪ್ರಭುತ್ವ ಶಕ್ತಿಯು ಮಹಾದೇವಿಯ ಭಕ್ತಿನಿಷ್ಠೆಗೆ ಚೆನ್ನಮಲ್ಲಿಕಾರ್ಜುನನೊಂದಿಗಿನ ಒಲವಿಗೆ ಸವಾಲಾಗಿ ನಿಲ್ಲುತ್ತದೆ. 'ಆಳುತನದ ಮಾತೇರಿಸಿ ನುಡಿದಡೆ ಆಗಳೆ ಕಟ್ಟಿದೆನು ಗಂಡುಡುಗೆಯ' ಗಂಡೆದೆಯ ಧೈರ್ಯ ಮೆರೆದ ಅಕ್ಕ ತನ್ನ ಬದುಕನ್ನು ಯಾರ ನಿಯಂತ್ರಣಕ್ಕೂ, ನಿರ್ಧಾರಗಳಿಗೂ ಅವಕಾಶ ಕೊಡದೆ ಹಠಮಾರಿ ಹಾಗೂ ಸ್ವಾಭಿಮಾನಿಯಾಗಿ ಉಳಿಯುತ್ತಾಳೆ.

ತಂದೆ ತಾಯಿಗೆ ಒದಗಿದ ಅಪಾಯವನ್ನು ಗ್ರಹಿಸಿದ ಮಹಾದೇವಿಯಕ್ಕ ಕೌಶಿಕನಿಗೆ ತಾನು ಲಿಂಗಸತಿ ಎನ್ನುವುದನ್ನು ತಿಳಿ ಹೇಳುತ್ತಾಳೆ. ಆಕೆಯ ಸಂಕಲ್ಪಶಕ್ತಿಯನ್ನು ಹಗುರವಾಗಿ ಭಾವಿಸಿದ ಕೌಶಿಕ ಬಲತ್ಕಾರಕ್ಕೆ ಮನಸ್ಸುಮಾಡಿದಾಗ ಮಹಾದೇಯಕ್ಕನ ಆತ್ಮ ಗೌರವ ಜಾಗೃತವಾಗುತ್ತದೆ. ಕೌಶಿಕನ ಬಯಕೆಯನ್ನು ಬಹಿರಂಗವಾಗಿಯೇ ಧಿಕ್ಕರಿಸಿದಾಗ ಆಕೆಯ ಬದುಕಿನ ಸಂಘರ್ಷದ ಹಾದಿ ತೆರೆಯುತ್ತದೆ. ಷರತ್ತಿನೊಂದಿಗೆ ಕೌಶಕನ ಅರಮನೆ ಸೇರಿದ ಅಕ್ಕ, ಆಕೆಯ ಷರತ್ತುಗಳನ್ನು ಕೌಶಿಕ ಪಾಲಿಸುವಲ್ಲಿ ಸೋಲುತ್ತಾನೆ. ಅವನ ದುರ್ವರ್ತನೆ ಮೇರೆ ಮೀರುತ್ತದೆ. ಪ್ರಭುತ್ವದ ಶಕ್ತಿ ತನ್ನ ಸಾಧನೆಗೆ ಕುತ್ತಾಗಿ ಕಾಡಿದಾಗ ಮಹಾದೇವಿಯಕ್ಕ ದಿಗಂಬರಳಾಗಿ ಹೊರಬರುತ್ತಾಳೆ. ಅಕ್ಕ ಸೀರೆಯೆಸೆದು ಕೇಶಾಂಬರಿಯಾದದ್ದು ಪುರುಷಾಧೀನದ ಸಾಂಕೇತವನ್ನು ಧಿಕ್ಕರಿಸಿದ್ದೇ ಆಗಿದೆ. ಇದು ಮಹಿಳಾ ದುರ್ಬಲತೆಯನ್ನು, ನಿಯಂತ್ರಣಗಳನ್ನು ಭಯಪಡಿಸುವ, ಹೆದರಿಸುವ ಕ್ರಿಯೆಗಳಿಗೆ ಪ್ರತೀಕಾರದಂತೆ ತೋರಿದೆ.

ಹಸಿವು–ತೃಷೆಗಳಿಗಾಗಿ ಮನುಷ್ಯ ಸಮಾಜದ ಅವಲಂಬನವನ್ನೂ ನಿರಾಕರಿಸಿ ಕಾಡು ಸೇರುತ್ತಾಳೆ. ಚಿಲಿಪಿಲಿ ಎಂದೋದುವ ಗಿಳಿ, ಕೋಗಿಲೆ, ಅಳಿ ಸಂಕುಲವನ್ನೇ ಸಂಗಾತಿಗಳನ್ನಾಗಿಸಿಕೊಳ್ಳುತ್ತಾಳೆ. ಆತ್ಮ ಸಂಗಾತ ಚೆನ್ನಮಲ್ಲಿಕಾರ್ಜುನನ ಒಲುಮೆಗಾಗಿ ಕಾಡು–ಮೇಡುಗಳನ್ನು ಸುತ್ತುತ್ತಾ ಗಿರಿ–ಗಂಹ್ವರಗಳನ್ನು ದಾಟುತ್ತಾ ಬಳಲುತ್ತಾಳೆ. ಇದು ಅಕ್ಕನ ಗಂಡುಧೈರ್ಯದ ಮನಸ್ಥಿತಿಗೆ ಸಾಕ್ಷಿಯಂತಿದೆ. ವಿರಕ್ತಿ ಮನಸ್ಥಿತಿಗೆ ತಲುಪಿದ ಅಕ್ಕನಿಗೆ ಊರುಬಿಟ್ಟು ಕಾಡುಸೇರಿ ಅಲೆದಾಡಿದರೂ ಅಲ್ಲಿ ಗಿರಿಗಳು ಬಿದ್ದರೂ, ಮುಗಿಲು ಹರಿದುಬಿದ್ದರೂ, ಹಸಿವು ಬಾಯರಿಕೆಯಾದರೂ ಲೆಕ್ಕವಿಲ್ಲ. ಇದು ಅಕ್ಕನ ಧೀರೋದಾತ್ತ ಮನಸ್ಥಿತಿ.

> ಒಂಟಿಯಾಗಿ ನಡೆದ ಅಕ್ಕನಿಗೆ ಮುಂದೆ ಎದುರಾದದ್ದು ಲೋಕದ ಕಾಮಕಾಟ.
> "ಬಟ್ಟಿಹ ಮೊಲೆಯ ಭರದ ಜವ್ವನದ ಚಲುವ ಕಂಡು ಬಂದಿರಣ್ಣಾ,
> ಅಣ್ಣಾ, ನಾನು ಹೆಂಗೂಸಲ್ಲ; ಅಣ್ಣಾ, ನಾನು ಸೂಳೆಯಲ್ಲ.
> ಅಣ್ಣಾ, ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ?
> ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಪುರುಷನು
> ನಮಗಾಗದ ಮೋರೆ ನೋಡಣ್ಣಾ!"[11]

'ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಹ ಪುರುಷರೆನಗೆ ಸಹೋದರ'ರೆಂದು ಕರೆದಳು. ಅಲ್ಲದೆ, ಮನದ ನಾಚಿಕೆ ಬಿಟ್ಟು ಬಂದವರು, ಹೆಣ್ಣಿನ ಸೊಗಸಿಗೆ ಮರುಳಾಗಿ ಬಂದವರು, ಅಸಹ್ಯ ತೋರುವ ಮೂತ್ರದ ನೆಲೆ ಎಂದು ಹೇಳುವ ಅಕ್ಕನಲ್ಲಿ ತಿಳಿಹೇಳಿ, ತಿದ್ದುವ ಪರಿಯೂ ಇದೆ, ಹಾಗೇ ಪುರುಷ ಕಾಮನೆಗೆ ಧಿಕ್ಕಾರವೂ ಇದೆ.

ಹೆಣ್ಣಿನಲ್ಲಿರುವ ವ್ಯಕ್ತಿತ್ವದ ಅಂತಃಸತ್ವವನ್ನೂ ಲೆಕ್ಕಿಸದ ಪುರುಷ ಲೈಂಗಿಕ ಬಲತ್ಕಾರಗಳನ್ನು, ಅವಳ ಅಭದ್ರತೆಯ ವಾಸನೆ ಹಿಡಿದು ಮೇಲೆರಗುವ ಕಾಮ ಲೋಕದ ದುರುಳ ಮನಸ್ಸುಗಳಿಗೆ, ಹೆಣ್ಣನ್ನು ಭೋಗದ ಸರಕನ್ನಾಗಿ ನೋಡಲು ಬಯಸುವ ಪುರುಷ ಲೋಕದೃಷ್ಟಿಗೆ ಅಕ್ಕನ ಈ ವೈಯುಕ್ತಿಕ ಪ್ರತಿಭಟನೆಯ ಉತ್ತರ ಎಂದೆಂದಿಗೂ ಅನಾವರಣಗೊಳಿಸಿಕೊಂಡಿದೆ.

'ವೇದಶಾಸ್ತ್ರಾಗಮ ಪುರಾಣಗಳೆಲ್ಲವು ಕೊಟ್ಟಣವ ಕಟ್ಟಿದ ನುಚ್ಚು ತೌಡು' ಎಂದು ಗಾಳಿಗೆ ತೂರುವ ಅಕ್ಕ ತಾನು ನಂಬಿದ ತತ್ವನಿಷ್ಠೆಯಲ್ಲಿ ಅಲ್ಲಿಯವರೆಗಿನ ಶಾಸ್ತ್ರ–ಪುರಾಣಗಳು ಹೆಣ್ಣಿನಲ್ಲಿ ಭಯ–ಭಕ್ತಿ ಮೂಡಿಸಿ ಪುರುಷಾಧೀನಕ್ಕೆ ತಂದಿಕೊಂಡಿದ್ದು, ಉಚ್ಚತ್ವ–ನೀಚತ್ವಗಳ ದ್ವಂದ್ವ ನಿರ್ಮಾಣಮಾಡಿ ಮೆರೆದ ವೈದಿಕ ಸಮಾಜದ ವೈಪರಿತ್ಯಗಳನ್ನು ಒಟ್ಟಾರೇ ಸ್ಥಗಿತಗೊಂಡ ಸಾಂಸ್ಕೃತಿಕ ಮೌಲ್ಯಗಳನ್ನು ಕದಡಿ ತನ್ನನ್ನು ತಾನು ಹೊಸದಾಗಿ ನಿರೂಪಿಸಿಕೊಳ್ಳುವ ಸಲುವಾಗಿ ಶಾಸ್ತ್ರ ಪುರಾಣಗಳ ಬಗ್ಗೆ ಅಕೆ ತೋರಿದ ಪ್ರತಿರೋಧ ದಿಟ್ಟತನ ಅವಳಲ್ಲಿನ ಪ್ರತಿಭಟನಾ ಶಕ್ತಿಯನ್ನು ತೋರಿಸುತ್ತದೆ. ಅಕ್ಕನ ಇಂತಹ ಲೋಕ ವಿರೋಧಿಯಾದ ನಡೆ ನುಡಿಗಳು ಅವಳ ಸಮಕಾಲೀನ ಪ್ರಪಂಚಕ್ಕೆ ಆಶ್ಚರ್ಯವಾಗಿ, ಪ್ರಶ್ನೆಯಾಗಿ ಕಾಡುತ್ತದೆ. ಅಕ್ಕ ತನ್ನ ಆತ್ಮಜ್ಞಾನದ ಬೆಳಕನ್ನು ಪಡೆಯಲು ಕಲ್ಯಾಣದ ಅನುಭವ ಮಂಟಪಕ್ಕೆ ಬರುತ್ತಾಳೆ. ಮಾರ್ಗಮಧ್ಯೆ ಕಿನ್ನರಯ್ಯ ಸತ್ವಪರೀಕ್ಷೆ ಎದುರಿಸುತ್ತಾಳೆ. ಅಕ್ಕನ ವ್ಯಕ್ತಿತ್ವವನ್ನು ಕೊಂಡಾಡಿದ ವಚನಕಾರರು ಆಕೆಯ ಆಧ್ಯಾತ್ಮಿಕ ತೀಕ್ಷ್ಣತೆಯನ್ನು ಇನ್ನಷ್ಟು ತೀಡಿ ಬೆಳೆಸುವರು. ಅಲ್ಲದೆ, ಅಕ್ಕನ ಅನುಭಾವ, ಆಧ್ಯಾತ್ಮಿಕ ಸಾಧನೆಯ ಗರಿಯನ್ನು ಮನಮೆಚ್ಚಿ ಹೊಗಳಿ ಮುಕ್ತಿಯ ಹಾದಿ ತೋರಿಸುತ್ತಾರೆ. ಯಾವ ಪರಿಸ್ಥಿತಿ ಬಂದರೂ ಹೆದರದ ಮನಸ್ಸುಳ್ಳ ಅಕ್ಕಮಹಾದೇವಿಯ ಅಂದಿನ ಚಾರಿತ್ರಿಕ ಸಂದರ್ಭದ ಸನ್ನಿವೇಶದಲ್ಲಿ ಭಕ್ತಿಯುಳ್ಳವರಾಗಿ ಪ್ರಗತಿಪರರಾಗಿ ನಿಂತ ಶರಣರು ಆಕೆಯ ನಡೆ–ನುಡಿಗೆ ಮನದೂಗಿ, ಅವಳ ಗುರಿಗೆ ಸೋಪಾನವಾಗಿದ್ದಾರೆ.

ಕಾಯ, ಕರಣ, ಪ್ರಾಣಗಳಲ್ಲಿ ಲಿಂಗ ಭಕ್ತಿಯನ್ನು ತುಂಬಿ, ಪದಾರ್ಥ ಕಾಯವನ್ನು ಪ್ರಸಾದಮಯವಾಗಿಸಿಕೊಂಡು, ಕಾಯ ಭಾವದಿಂದ ಲಿಂಗಭಾವಕ್ಕೆ ವಿಸ್ತರಿಸಿಕೊಂಡು ಮುಕ್ತಚೇತನವಾಗಿದ್ದಾಳೆ. ಶರಣಸತಿಯಾಗಿ ಲಿಂಗಪತಿಗೆ ಶಿವಾರ್ಪಿತಗೊಂಡು ಅರ್ಪಣಾನಂದ ಅನುಭವಿಸಿದ್ದಾಳೆ. ಲಿಂಗ ಸತಿಯಾಗಲು ಲೋಕದ ಕಾಮ ಕ್ರೋಧಾದಿ ಅಂಗ ಗುಣಗಳನ್ನು ಲಿಂಗ ಮುಖವಾಗಿಸಿಕೊಂಡು ಲಿಂಗ ಪ್ರಾಣಿಯಾಗಿದ್ದಾಳೆ. ಅಹಂಕಾರ, ಮಮಕಾರಗಳನ್ನೆಲ್ಲ ಶಿವಭಾವದಲ್ಲಿ ಲಯಗೊಳಿಸಿಕೊಂಡಿದ್ದಾಳೆ. ಆಕೆಯ ಭಕ್ತಿ ದಿವ್ಯಾನಂದದ ಪರಾಕಾಷ್ಠೆಯಲ್ಲಿ ಸ್ಥಿತಗೊಂಡಿದೆ. ಈ ವಿರಾಗಿಣಿಯ ಆತ್ಮೋನ್ನತಿಯು ಶ್ರೀಶೈಲ ದರ್ಶನದೊಂದಿಗೆ ಲಯವಾಗಿದೆ.

ಅಕ್ಕನ ಲೌಕಿಕ ವಿಮೋಚನೆಯಲ್ಲಿ ಚಿಂತನಶೀಲತೆ, ಬುದ್ಧಿಶಕ್ತಿ, ವಿವೇಚನೆ ಹಾಗೂ ವೀರಶೈವಧರ್ಮ ಸಿದ್ಧಾಂತದ ಷಟ್‌ಸ್ಥಲ, ಅಷ್ಟಾವರಣಗಳಲ್ಲಿ ಗಾಢ ಭಕ್ತಿ, ಶ್ರದ್ಧೆ ಅಂತರಂಗದಲ್ಲಿ ವ್ಯಕ್ತವಾಗಿದೆ. ಬಹಿರಂಗದಲ್ಲಿ ದಿಗಂಬರಳಾಗಿ, ಸ್ತ್ರೀ ಸಹಜವಾದ ಮನೋಧರ್ಮಗಳನ್ನು ಮೀರಿ ಬೆಳೆದು ಲೌಕಿಕ ಸಹಜತೆಗೆ ಅಪವಾದವೆನಿಸಿ ಅಪರೂಪದ ವ್ಯಕ್ತಿತ್ವವನ್ನು ವ್ಯಕ್ತಪಡಿಸಿದ್ದಾಳೆ. ಸಾಮಾಜಿಕ ಬದುಕಿನಲ್ಲಿ ವಿವಾಹದ ಪವಿತ್ರತೆ, ಪತಿದೈವ ನಂಬಿಕೆ, ಸಂಸಾರ ಸಂಬಂಧ ಮುಂತಾದ ಕಟ್ಟಳೆಗಳನ್ನು ಮುರಿಯುವ ಮೂಲಕ ಸಂಪ್ರದಾಯ ಹಾಗೂ ಸಮಾಜವ್ಯವಸ್ಥೆಗೆ ತನ್ನ

ಪ್ರತಿಭಟನೆಯನ್ನು ತೋರಿಸಿದ್ದಾಳೆ. ಹೆಣ್ಣಿನ ಮೌನ ಇತಿಹಾಸದಲ್ಲಿ ಅಕ್ಷರ ಕಲಿತವಳಾಗಿ ಮಾತಾಡಿ ಅಭಿವ್ಯಕ್ತಿ ಸ್ವತಂತ್ರಕ್ಕೆ ಮುನ್ನುಡಿ ಬರೆದು ಸಾಧನೆಯ ಮೂಲಕ ಪ್ರಾರಂಭವಾದದ್ದು ಅಕ್ಕಮಹಾದೇವಿಯ ಮೊದಲ ಮಹಿಳಾ ಪ್ರತಿಭಟನೆ ಹೆಜ್ಜೆ. ಆತ್ಮವಂಚನೆಯಿಲ್ಲದ ಅಕ್ಕನ ಅಭಿವ್ಯಕ್ತಿಯ ಆತ್ಮವಿಮರ್ಶೆ ಮಾಡುತ್ತಲೇ ವ್ಯವಸ್ಥೆಯನ್ನೂ ವಿಮರ್ಶಿಸಿದವಳಾಗಿದ್ದಾಳೆ. ಏಕಕಾಲದಲ್ಲಿ ಸ್ಥಗಿತಗೊಂಡ ಸಮಾಜವನ್ನು, ಗುಲಾಮಗಿಯ ಪ್ರತೀಕವಾದ ಪ್ರಭುತ್ವವನ್ನು ಹೋರಾಟದ ಮೂಲಕ ಎದುರಿಸಿ ತನ್ನ ನಂಬಿಕೊಂಡ ಮೌಲ್ಯಗಳನ್ನು ಸ್ಥಾಪಿಸಿ ದಿಟ್ಟತನ ತೋರಿಸಿ ಹೋರಾಟಗಾರರ್ತಿಯಾಗಿ ಇತಿಹಾಸದ ಎಲ್ಲಾ ಮಿತಿಗಳನ್ನು ಮೀರಿ ಹೆಣ್ಣಿನ ಹೊಸ ಬದುಕಿನ ವಿಧಾನವೊಂದನ್ನು ರೂಪಿಸಿ ಹೊಸ ಇತಿಹಾಸವನ್ನು ನಿರ್ಮಿಸಿದ್ದಾಳೆ. ಪ್ರಖರ ವೈರಾಗ್ಯದ ಮೂಲಕ ಗುರಿಗಾಗಿ ಜೀವನದುದ್ದಕ್ಕೂ ಶ್ರಮಿಸಿದ್ದಾಳೆ. ವಿರಾಗಿಯಾಗಿ, ಅನುಭಾವಿಯಾಗಿ, ಕವಯತ್ರಿಯಾಗಿದ್ದಾಳೆ. ಅಲ್ಲದೆ, ಅಕ್ಕನ ಈ ವ್ಯಕ್ತಿತ್ವ ಮಹಿಳಾ ಜೀವಪರ ಕಾಳಜಿಗಳ ಹೊಸ ಹೊಸ ಸಾಧ್ಯತೆಗಳಿಗೆ ಕಾರಣವಾಗಿದೆ.

**ಉಲ್ಲೇಖ**


1. ವೀರಣ್ಣ ರಾಜೂರ(ಸಂ), ಶಿವಶರಣಿಯರ ವಚನಗಳು, ಡಾ. ವೀರಣ್ಣ ರಾಜೂರ (ಸಂ), ಶಿವಶರಣೆಯರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2001, ವಚನ–292, ಪುಟ–87.
2. ಡಾ. ಸಾ. ಶಿ. ಮರುಳಯ್ಯ(ಸಂ), ಅಕ್ಕನ ವಚನಗಳು, ಸಪ್ನ ಬುಕ್ ಹೌಸ್, ಬೆಂಗಳೂರು–2010,
3. ಎಲ್ ಬಸವರಾಜು(ಸಂ), ಅಕ್ಕವಚನಗಳು, ಗೀತಾ ಬುಕ್ ಹೌಸ್, ಮೈಸೂರು–1972
4. ಡಾ. ವಿಜಯಾ ದಬ್ಬೆ, ಮಹಿಳೆ ಸಮಾಜ ಸಾಹಿತ್ಯ ಸಮಾಜ, ರಚನಾ ಪ್ರಕಾಶನ, ಮೈಸೂರು–1989
5. ವೀಣಾ ಬನ್ನಂಜೆ, ಅಕ್ಕಮಹಾದೇವಿಯ ದ್ವೈತ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2007